ತೊಡಗಿಸಿಕೊಂಡಿದ್ದಾರೆ. ರೇಷ್ಮೆ ಕೃಷಿಯಲ್ಲಷ್ಟೇ ಅಲ್ಲ ರೇಷ್ಮೆಯ ಬಳಕೆಯಲ್ಲೂ ಕೂಡಾ ಇವರಿಗೇ ಆದ್ಯತೆ. ಒಂದು ಅಂದಾಜಿನಂತೆ ಒಟ್ಟು ಉತ್ಪಾದನೆಯ ಶೇ 90 ರಷ್ಟು ರೇಷ್ಮೆ ಸೀರೆಗಳ ತಯಾರಿಕೆಗೇ ಉಪಯೋಗಿಸಲ್ಪಡುತ್ತದೆ.

ಇಷ್ಟಾಗಿಯೂ ರೇಷ್ಮೆ ಕೃಷಿಯಲ್ಲಿ ಮಹಿಳೆಯರ ವಿರುದ್ಧ ತಾರತಮ್ಯ ಕಂಡುಬರುತ್ತಿರುವುದು ವಿಪರ್ಯಾಸ. ಅನೇಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಲಿಂಗ ತಾರತಮ್ಯವನ್ನು ನಿವಾರಿಸುವ ಗಂಭೀರ ಪ್ರಯತ್ನಗಳು ನಡೆದಿಲ್ಲ.

## ಸುಸ್ಥಿರ ಅಭಿವೃದ್ಧಿಗಾಗಿ

ಈ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಕೇಂದ್ರ ರೇಷ್ಮೆ ಮಂಡಳಿ, ರೇಷ್ಮೆ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು / ಯೋಜನೆಗಳನ್ನು ಕಾಲಕಾಲಕ್ಕೆ ಹಾಕಿಕೊಳ್ಳುತ್ತದೆ. ಸದ್ಯದ ಅಗತ್ಯವೆಂದರೆ, ಅವರನ್ನು ಅಭಿವೃದ್ಧಿ ಪ್ರಯತ್ನಗಳಲ್ಲಿ ತೊಡಗಿಸುವುದು. ಅವರಿಗೆ ಒಂದು ಸರಿಸಮನಾದ ಸುಸ್ಥಿರ ಚೌಕಟ್ಟನ್ನು ಒದಗಿಸುವುದರ ಮೂಲಕ ಇದನ್ನು ಸಾಧಿಸಬಹುದು.

1989ರಲ್ಲೇ ಕೇಂದ್ರ ಕೃಷಿ ಮಂಡಳಿ ಮತ್ತು ರೇಷ್ಮೆ ಉತ್ಪಾದಿಸುವ ರಾಜ್ಯಗಳು, ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿದ್ದವು. ವಿಶ್ವ ಬ್ಯಾಂಕ್ ಯೋಜನೆ, ಸ್ವಿಸ್ ಅಭಿವೃದ್ಧಿ ಯೋಜನೆಯಡಿ ರೂಪಿಸಿದ ರಾಷ್ಟ್ರೀಯ ರೇಷ್ಮೆ ಕೃಷಿ ಯೋಜನೆಯ ಮುಖಾಂತರ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ಯಶಸ್ವೀ ಪ್ರಯತ್ನಗಳನ್ನು ಮಾಡಲಾಗಿತ್ತು. ಅವುಗಳಲ್ಲಿ ಈ ಕೆಳಗಿನವು ಮುಖ್ಯವಾದವು:

❖ ಮಹಿಳಾ ಗುಂಪುಗಳ ಮೂಲಕ ಅವರಿಗೆ ಭೂಮಿ, ಸಾಲ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವುದು.

ಪರಸ್ಪರ ಲಾಭ ಪಡೆಯಲು ಸಾಧ್ಯವಾಗುವಂತೆ ಮಹಿಳಾ ಗುಂಪುಗಳನ್ನು ರಚಿಸುವುದು ತುಂಬಾ ಯಶಸ್ವಿ ಯೋಜನೆಯಾಗಿತ್ತು. ಇಂತಹ ಗುಂಪುಗಳಿಗಾಗಿ ಸರ್ಕಾರಿ ಭೂಮಿಯನ್ನು, ಸಾಮೂಹಿಕ ರೇಷ್ಮೆ ಹುಳು ಸಾಕಣೆ ಮನೆಯನ್ನು, ನೀರಾವರಿ ಸೌಲಭ್ಯಗಳು, ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಹಾಗೂ ತಾಂತ್ರಿಕ ತರಬೇತಿಯನ್ನೂ ಮಾರಾಟ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಇಂಥದೊಂದು ಪ್ರಯತ್ನ ಅನುಕರಣೀಯ ಮಾದರಿಯಾಗಿ ಹೊರಹೊಮ್ಮಿತ್ತು.

❖ ತಾಂತ್ರಿಕ ತಿಳುವಳಿಕೆ ಹಾಗೂ ಕೌಶಲ್ಯ ಅಭಿವೃದ್ಧಿ: ರೇಷ್ಮೆ ಕೃಷಿಯ ವಿವಿಧ ತಾಂತ್ರಿಕ ಚಟುವಟಿಕೆಗಳಲ್ಲಿ ಮಹಿಳೆಯರಿಗಾಗಿ ಇರುವ ತಾಂತ್ರಿಕತೆಗಳನ್ನು ಗುರುತಿಸಿ ನಂತರ ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರಿನ ಕೇಂದ್ರ ರೇಷ್ಮೆ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ತಲಘಟ್ಟಪುರ ಇಲ್ಲಿ ತರಬೇತಿ ನೀಡಲಾಯಿತು. ಮಹಿಳೆಯರಿಗಾಗಿ ವಿಶೇಷ ತರಬೇತಿ ಯೋಜನೆಗಳು ಹಾಗೂ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಯಿತು. ಮಹಿಳಾ ವಿಸ್ತರಣಾಧಿಕಾರಿಗಳನ್ನು ಮಹಿಳಾ ಗುಂಪುಗಳೊಡನೆ ಕಾರ್ಯ ನಿರ್ವಹಿಸುವಂತೆ ನಿಯೋಜಿಸಲಾಯಿತು.



❖ ಸಾಲ ದೊರಕಿಸುವುದು: ಯಾವುದೇ ಉದ್ಯಮದ ಯಶಸ್ಸು ಮುಖ್ಯವಾಗಿ ಮೂಲ ಬಂಡವಾಳದ ಮೇಲೆ ಅವಲಂಬಿಸಿದೆ. ಇದು ಸಾಲರೂಪದಲ್ಲಿದ್ದರೆ ಇದಕ್ಕೆ ಗ್ಯಾರಂಟಿ ಹಾಗೂ ಸೆಕ್ಯೂರಿಟಿಗಳೊಡನೆ ನೇರ ಸಂಬಂಧವಿದೆ. ಮಹಿಳೆಯರಿಗೆ ಈ ರೀತಿಯಾಗಿ ಬಂಡವಾಳ ಹೂಡುವುದು ಅಸಾಧ್ಯವೆಂದೇ ಹೇಳಬಹುದು. ಇಂತಹ ತೊಂದರೆಯನ್ನು ನಿವಾರಿಸಲು ಪರಸ್ಪರ ನಂಬಿಕೆಯ ಮೇಲೆ ಗುಂಪು ಗ್ಯಾರಂಟಿ ಯೋಜನೆಯನ್ನು ಹಾಗೂ ಭೂಮಿ ಹಾಗೂ ಮನೆಯ ಮೇಲೆ ಜಂಟಿ ಮಾಲೀಕತ್ವವನ್ನು ಸೂಚಿಸಲಾಗಿತ್ತು.

❖ ಮಾರುಕಟ್ಟೆ ಹಾಗೂ ಮಾರುಕಟ್ಟೆ ಬಗೆಗಿನ ತಿಳುವಳಿಕೆ: ತಮ್ಮ ಕಠಿಣ ಪರಿಶ್ರಮದ ಫಲವನ್ನು ಹಣದ ರೂಪದಲ್ಲಿ ಪಡೆಯುವುದೇ ಮಹಿಳೆಯರಿಗೊಂದು ಹೆಮ್ಮೆ. ಇಂಥದೊಂದು ಪ್ರಯತ್ನ ಅವರನ್ನು ಸ್ವಂತ ಕಾಲ ಮೇಲೆ ನಿಲ್ಲುವಂತೆ ಪ್ರೇರೇಪಿಸುತ್ತದೆ ಕೂಡ. ಕರ್ನಾಟಕದ ಪ್ರಮುಖ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಮಹಿಳೆಯರಿಗಾಗಿಯೇ ವಿಶೇಷ ವಿಭಾಗಗಳನ್ನು ತೆರೆಯಲಾಗಿತ್ತು. ಮಹಿಳೆಯರಿಗೆ ಮಾರುಕಟ್ಟೆ ಹಾಗೂ ವಹಿವಾಟು, ಕುರಿತಾಗಿ ಗೂಡಗಳ ಗುಣಮಟ್ಟ ಮತ್ತು ದರಗಳ ಕುರಿತಾಗಿ ವಿಶೇಷ ತಿಳುವಳಿಕೆಯನ್ನು ನೀಡಲಾಗಿತ್ತು. ಮಹಿಳಾ ಬೆಳೆಗಾರರಿಗೆ ಸಹಾಯ ಮಾಡಲು ವಿಶೇಷ ಮಹಿಳಾ ಮೇಲ್ವಿಚಾರಕರನ್ನು ನೇಮಿಸಲಾಗಿತ್ತು.

❖ ಉದ್ಯೋಗದಿಂದಾಗಿ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳಿಗೆ ಪರಿಹಾರ: ನೂಲು ಸುತ್ತುವಿಕೆ ಹಾಗೂ ಮೊಟ್ಟೆ ಉತ್ಪಾದನಾ ಕೇಂದ್ರಗಳನ್ನು ಹೊರತುಪಡಿಸಿದರೆ ಬಹಳಷ್ಟು ರೇಷ್ಮೆ ಸಂಬಂಧಿ ಚಟುವಟಿಕೆಗಳು ಮಾಲಿನ್ಯ ರಹಿತವಾಗಿವೆ ಎಂದು ಹೇಳಬಹುದು. ಉದಾಹರಣೆಗೆ ರೇಷ್ಮೆ ನೂಲು ಸುತ್ತುವಿಕೆಯಲ್ಲಿ ಆಸ್ತಮಾ, ಗುಳ್ಳೆಗಳು, ಕಣ್ಣುರಿಗಳ ಕಾಟ ಹೆಚ್ಚು. ಒಬ್ಬ ವೈದ್ಯರನ್ನು ಒಳಗೊಂಡ ತಜ್ಞರ ಸಮಿತಿ ಇಂತ ತೊಂದರೆಗಳನ್ನು/ ಪರಿಸ್ಥಿತಿಯನ್ನು ಅಭ್ಯಸಿಸಿ ತಕ್ಕ ಸಮಾಧಾನವನ್ನು, ಸಲಹೆ ಸೂಚನೆಗಳನ್ನು ಕೊಡುವಂತೆ ಮಾಡಲಾಯಿತು. ಹೊಗೆರಹಿತ ಒಲೆ, ವಿವಿಧ ಉರುವಲಿನ ಒಲೆ, ಶುದ್ಧ ಹಾಗೂ ಮೆದು ನೀರು, ಸಮರ್ಪಕ ಚರಂಡಿ ವ್ಯವಸ್ಥೆ, ಒಳ್ಳೆಯ ಗಾಳಿ ಸಂಚಾರ, ಪಾದರಕ್ಷೆಗಳ ಉಪಯೋಗ ಇತ್ಯಾದಿಗಳು ಇಂತಹ ಸಲಹೆ ಸೂಚನೆಗಳಲ್ಲಿ ಸೇರಿದ್ದವು. ಮಹಿಳೆಯರಿಗಾಗಿ ನಿಯಮಿತವಾಗಿ ವೈದ್ಯಕೀಯ ತಪಾಸಣೆಯನ್ನೂ ಏರ್ಪಡಿಸಲಾಗಿತ್ತು. ಇಂತಹ ಕ್ರಮಗಳು ತುಂಬಾ ಪರಿಣಾಮಕಾರಿ ಸಕಾರಾತ್ಮಕ ಪರಿಣಾಮವನ್ನು ಬೀರಿದ್ದವು.

ರೇಷ್ಮೆ ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸುವುದನ್ನು ಉತ್ತೇಜಿಸಲು, ಸಹಕರಿಸಲು ಹಾಗೂ ಪರಿವೀಕ್ಷಿಸಲು ಕೇಂದ್ರ ರೇಷ್ಮೆ ಮಂಡಳಿ ಮತ್ತು ಸಂಬಂಧಿಸಿದ ರಾಜ್ಯ ಇಲಾಖೆಗಳಲ್ಲಿ ಮಹಿಳಾ ಅಭಿವೃದ್ಧಿ ಘಟಕಗಳನ್ನು ತೆರೆಯಬೇಕು. ವಿವಿಧ ಯೋಜನೆಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಸಹಾಯಧನವನ್ನು ಕೊಡುವುದು. ನಿರ್ಧಾರ ಕೈಗೊಳ್ಳುವ ನಿಟ್ಟಿನಲ್ಲಿ ಮಹಿಳೆಯರನ್ನು ಸಬಲರನ್ನಾಗಿಸಬೇಕು. ಕೈಗಾರಿಕಾ ಇಲಾಖೆಯ ಕೈಗಾರಿಕಾ ಶೆಡ್‌ಗಳನ್ನು ಮಹಿಳೆಯರಿಗಾಗಿ ಮೀಸಲಿಡಬೇಕು. ಈ ಮೂಲಕ ಮಹಿಳೆಯರನ್ನು ಈ ಕ್ಷೇತ್ರದಲ್ಲಿ ಸಬಲಗೊಳಿಸಬಹುದು.

ರೇಷ್ಮೆ ಮತ್ತು ಮೀನುಗಾರಿಕೆ, ರೇಷ್ಮೆ ಮತ್ತು ಹೈನುಗಾರಿಕೆಯಂತಹ ಪೂರಕ ಉದ್ಯೋಗಗಳೊಂದಿಗೆ ರೇಷ್ಮೆ ಕೃಷಿಯನ್ನು ಬೆಸೆಯುವುದು ಕೂಡಾ ಆಗಬೇಕು. ಆಡಳಿತಗಾರರಿಗೆ, ವಿಜ್ಞಾನಿಗಳಿಗೆ ಹಾಗೂ ತಂತ್ರಜ್ಞರಿಗೆ ಮಹಿಳಾ ಕಾರ್ಯಕ್ರಮಗಳ ಬಗ್ಗೆ ಅರಿವು ಉಂಟು ಮಾಡುವುದು ಮತ್ತು ಮಹಿಳಾ ಗುಂಪುಗಳ ಮೂಲಕ ರೇಷ್ಮೆ ಕೃಷಿ ಪರಿಕರಗಳ ಪೂರೈಕೆ ಕೇಂದ್ರಗಳ ಸ್ಥಾಪನೆ ಈ ನಿಟ್ಟಿನಲ್ಲಿ ಆಗಬೇಕಾದ ಮುಖ್ಯ ಕೆಲಸಗಳು. ■